**PAPER CLIPPINGS**

ಷಯ : DEPARTMENT / SUBJECT:

ರು : NAME OF THE NEWS PAPER: ಉದಯವಾಣಿ ದಿನಾಂಕ : DATE : 29/12/20

# ಗೋಶಾಲೆಗಳ ಬಲ

## ಗೋಹತ್ಯೆ ನಿಷೇಧ ಕಾಯ್ದೆಗೆ ಸುಗ್ರೀವಾಜ್ಞೆ । ಸಂಪುಟ ನಿರ್ಧಾರ

## ವಧೆಗಾಗಿ ಗೋವುಗಳ ಮಾರಿದರೆ ಜೈಲು ಶಿಕ್ಷೆ, ದಂಡ ಖಚಿತ

**ಬೆಂಗಳೂರು:** ವಿಧಾನಸಭೆಯಲ್ಲಿ ಒಪ್ಪಿಗೆ ಸಿಕ್ಕರೂ, ಪರಿಷತ್‌ನಲ್ಲಿ ಮಂಡನೆಯಾಗದೇ ಬಾಕಿ ಉಳಿದಿರುವ ಗೋಹತ್ಯೆ ನಿಷೇಧ ಕಾಯ್ದೆಗೆ ಸುಗ್ರೀವಾಜ್ಞೆಯ ಬಲ ಸಿಕ್ಕಿದೆ.

ಸೋಮವಾರ ನಡೆದ ರಾಜ್ಯ ಸಚಿವ ಸಂಪುಟ ಸಭೆಯಲ್ಲಿ ಕರ್ನಾಟಕ ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣಾ ಕಾಯ್ದೆಯನ್ನು (ಗೋಹತ್ಯೆ ನಿಷೇಧ) ಸುಗ್ರೀವಾಜ್ಞೆ ಮೂಲಕ ಜಾರಿಗೊಳಿಸಲು ತೀರ್ಮಾನಿಸಲಾಗಿದೆ. ಜತೆಗೆ ವಯಸ್ಸಾದ ಗೋವು, ಎತ್ತು, ಗಂಡು ಕರುಗಳಿಗಾಗಿ ಗೋಶಾಲೆ ನಿರ್ಮಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ.

ಸುಗ್ರೀವಾಜ್ಞೆಯನ್ನು ಮಂಗಳವಾರವೇ ರಾಜ್ಯಪಾಲರ ಒಪ್ಪಿಗೆಗೆ ಕಳುಹಿಸಲಿದ್ದು, ಅವರು ಸಹಿ ಹಾಕುತ್ತಿದ್ದಂತೆ ತಕ್ಷಣವೇ ಈ ಕಾಯ್ದೆ ಜಾರಿಗೊಳಿಸಲು ಸಂಪುಟದಲ್ಲಿ ತೀರ್ಮಾನಿಸಲಾಗಿದೆ.

**ಆರ್‌ಎಸ್‌ಎಸ್ ಅಜೆಂಡಾ ಅಲ್ಲ:** ಸಂಪುಟ ಸಭೆಯ ನಂತರ ಮಾತನಾಡಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಜೆ.ಸಿ. ಮಾಧುಸ್ವಾಮಿ, ಗೋಹತ್ಯೆ ನಿಷೇಧ ಕಾಯ್ದೆ 1964ರಿಂದ ಜಾರಿಯಲ್ಲಿದೆ. ಆದರೆ, ಕಾನೂನು ಬಿಗಿಯಾಗಿರಲಿಲ್ಲ. ಈಗ ಅದರಲ್ಲಿನ ನಿಯಮಗಳನ್ನು ಬದಲಾಯಿಸಲಾಗಿದೆ. ಈ ಕಾಯ್ದೆಯ ಬಗ್ಗೆ ಯಾಕೆ ಇಷ್ಟೊಂದು ಗೊಂದಲ ಸೃಷ್ಟಿಸುತ್ತಿದ್ದಾರೆ? ಗೋಹತ್ಯೆ ನಿಷೇಧ ಆರ್‌ಎಸ್‌ಎಸ್ ಅಜೆಂಡಾ ಅಲ್ಲ, ಸಂವಿಧಾನ ರಚನಾಸಮಿತಿ ಸಭೆಯಲ್ಲಿಯೇ ಈ ಬಗ್ಗೆ ಚರ್ಚೆಯಾಗಿದೆ. ಅಲ್ಲದೇ ರಾಷ್ಟ್ರಪಿತ ಗಾಂಧೀಜಿಯವರ ಕನಸಿತ್ತು. ಅದನ್ನೇ ನಾವು ಅನುಸರಿಸುತ್ತಿದ್ದೇವೆ. ಎಲ್ಲ ವಯೋಮಾನದ ಹಸು ಕರುಗಳ ಹತ್ಯೆಗೆ ಮಾತ್ರ ನಿರ್ಬಂಧ ಹೇರಲಾಗಿದೆ. 13 ವರ್ಷ ಮೀರಿದ ಎಮ್ಮೆ ಕೋಣಗಳನ್ನು ವಧಿಸಲು ಅವಕಾಶ ಕಲ್ಪಿಸಲಾಗಿದೆ. ವಧಾಗಾರಗಳನ್ನು ಸರ್ಕಾರ ನಿಷೇಧಿಸುವುದಿಲ್ಲ, ಮಾಂಸ ಮಾರಾಟಕ್ಕೂ ಯಾವುದೇ ಅಡ್ಡಿಯಿಲ್ಲ ಎಂದು ಹೇಳಿದರು.

ಅಕ್ರಮವಾಗಿ ಗೋವುಗಳನ್ನು ಸಾಗಿಸುವವರನ್ನು ಹಿಡಿಯುವವರ ಮೇಲೆ ಹಲ್ಲೆಯಾಗುವುದನ್ನು ತಪ್ಪಿಸಲು ಅವರಿಗೆ ರಕ್ಷಣೆ ನೀಡಲಾಗುತ್ತಿದೆ. ಅಕ್ರಮವಾಗಿ ಗೋವುಗಳನ್ನು ಸಾಗಿಸುವ ವಾಹನ ವಶಪಡಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಇವರಿಗೆ ಬ್ಯಾಂಕ್ ಭರವಸೆಯ ಮೇಲೆ ವಾಹನ ಬಿಡುಗಡೆ ಮಾಡಲು ಅವಕಾಶ ಕಲ್ಪಿಸಲಾಗಿವೆ ಎಂದು ಹೇಳಿದರು.

**ಸರ್ಕಾರದಿಂದಲೇ ಗೋಶಾಲೆ:** ರೈತರು ಸಣ್ಣ ಗಂಡು ಕರುಗಳನ್ನು ಹಾಗೂ ಖಾಯಿಲೆ ಬಿದ್ದ ಹಸುಗಳನ್ನು ಸಾಕಲು ಆಗುವುದಿಲ್ಲ, ಅವರು ಮಾರಾಟ ಮಾಡುತ್ತಾರೆ. ಅಂತಹ ಹಸು, ಕರುಗಳನ್ನು ಸರ್ಕಾರವೇ ಗೋಶಾಲೆಗಳ ಮೂಲಕ ನೋಡಿಕೊಳ್ಳಲಿದೆ. ಸ್ವಯಂಸೇವಾ ಸಂಸ್ಥೆಗಳ ಸಹಕಾರದೊಂದಿಗೆ ಗೋಶಾಲೆಗಳನ್ನು ತೆರೆಯಲಾಗುವುದು ಎಂದರು.

### ಗೋ ಹತ್ಯೆ ನಿಷೇಧ ಕಾಯ್ದೆ, ಏನು ಎತ್ತ?

**1 ಎಷ್ಟು ವಯಸ್ಸಿನ ಹಸುಗಳನ್ನು ವಧೆಗಾಗಿ ಮಾರಾಟ ಮಾಡಲು ಅವಕಾಶವಿದೆ?**
ವಧೆಗಾಗಿ ಯಾವುದೇ ವಯಸ್ಸಿನ ಹಸುಗಳನ್ನು ಮಾರಾಟ ಮಾಡುವಂತಿಲ್ಲ.

**2 ವಧೆ ಮಾಡಲು ಗಂಡು ಕರುಗಳು, ಎತ್ತುಗಳನ್ನು ಮಾರಾಟ ಮಾಡಬಹುದೆ?**
ಇಲ್ಲ.

**3 ಹಸುಗಳಿಗೆ ಹುಟ್ಟುವ ಗಂಡು ಕರುಗಳನ್ನು ಸಾಕಲು ಆಗದವರು ಏನು ಮಾಡಬೇಕು ?**
ರಾಜ್ಯ ಸರ್ಕಾರ ತೆರೆಯುವ ಗೋಶಾಲೆಗಳಿಗೆ ಬಿಡಬಹುದು. ಸರ್ಕಾರದ ವತಿಯಿಂದ ಪ್ರತಿ ಜಿಲ್ಲೆಯಲ್ಲಿಯೂ ಸ್ವಯಂ ಸೇವಾ ಸಂಸ್ಥೆಗಳ ಸಹಯೋಗದೊಂದಿಗೆ ಗೋ ಶಾಲೆ ತೆರೆಯಲಾಗುತ್ತದೆ.

**4 ಗೋಶಾಲೆಗೆ ಕರು ಹಾಗೂ ಎತ್ತು ಬಿಟ್ಟರೆ ಸರ್ಕಾರ ಹಣ ನೀಡುತ್ತಾ ?**
ಇವುಗಳನ್ನು ಸರ್ಕಾರವೇ ನೋಡಿಕೊಳ್ಳುವುದರಿಂದ ರೈತರಿಗೆ ನಿರ್ದಿಷ್ಟ ಹಣ ನೀಡುವ ಬಗ್ಗೆ ಯಾವುದೇ ಪ್ರಸ್ತಾಪವಿಲ್ಲ.

**5 ಎತ್ತುಗಳನ್ನು ಕೃಷಿ ಸಂಬಂಧಕ್ಕೆ ಸಾಗಣೆ ಮಾಡಲು ಅನುಮತಿ ಪಡೆಯಬೇಕಾ ?**
ಕೃಷಿ ಕೆಲಸಕ್ಕೂ ಸಾಗಣೆ ಮಾಡಲು ಪಶು ವೈದ್ಯಾಧಿಕಾರಿಗಳ ಅಧಿಕೃತ ಅನುಮತಿ ಪಡೆಯುವುದು ಕಡ್ಡಾಯ.

**6 ಎಷ್ಟು ವರ್ಷದ ಎಮ್ಮೆ, ಕೋಣಗಳನ್ನು ವಧೆ ಮಾಡಲು ಮಾರಾಟ ಮಾಡಬಹುದು ?**
13 ವರ್ಷ ಮೀರಿದ ಎಮ್ಮೆ ಕರು, ಕೋಣಗಳನ್ನು ವಧೆ ಮಾಡಲು ಮಾರಾಟ ಮಾಡಲು ಅವಕಾಶವಿದೆ.

**7 ಇನ್ನು ಮುಂದೆ ರಾಜ್ಯದಲ್ಲಿ ಆಹಾರ ಸೇವನೆಗೆ ಬೀಫ್ (ದನದ ಮಾಂಸ) ಸಿಗುವುದಿಲ್ಲವೇ ?**
ಹಸು, ಕರು, ಎತ್ತುಗಳ ಮಾಂಸ ಸಿಗುವುದಿಲ್ಲ. ಆದರೆ, 13 ವರ್ಷ ಮೀರಿದ ಎಮ್ಮೆ, ಕೋಣದ ಮಾಂಸ ತಿನ್ನಲು ದೊರೆಯುತ್ತದೆ.

**8 ಉಪಯೋಗಕ್ಕೆ ಬಾರದ ಹಸು, ಎತ್ತುಗಳನ್ನು ಮನೆಯಲ್ಲಿಟ್ಟುಕೊಂಡರೆ ಸರ್ಕಾರ ಮೇವಿಗೆ ಅನುದಾನ ನೀಡುತ್ತದೆಯಾ ?**
ಅನುದಾನ ನೀಡುವುದಿಲ್ಲ. ಆದರೆ, ಗೋಶಾಲೆಗೆ ತಂದು ಬಿಡಲು ಅವಕಾಶ ಕಲ್ಪಿಸಲಾಗಿದೆ.

**9 ಸರ್ಕಾರದ ಅನುಮತಿ ಪಡೆಯದೇ ಗೋವು, ಎತ್ತುಗಳನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸಾಗಿಸಿದರೆ ಅಪರಾಧವಾಗುತ್ತಾ ?**
ಪಶು ವೈದ್ಯಾಧಿಕಾರಿಗಳಿಂದ ಅಧಿಕೃತ ಅನುಮತಿ ಪಡೆಯದೇ ಸಾಗಣೆ ಮಾಡಿದರೆ ಅದು ಕಾನೂನು ಪ್ರಕಾರ ಅಪರಾಧವಾಗುತ್ತದೆ.

**10 ಹಸು, ಎತ್ತುಗಳನ್ನು ಅಕ್ರಮವಾಗಿ ಸಾಗಾಟ ಮಾಡಿದರೆ ಏನು ಶಿಕ್ಷೆ ?**
6 ತಿಂಗಳಿಂದ 7 ವರ್ಷದ ವರೆಗೆ ಶಿಕ್ಷೆ, 5 ಲಕ್ಷದವರೆಗೂ ದಂಡ ವಿಧಿಸಲು ಅವಕಾಶ.

